ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಯಾವಾಗಲೂ ನಿಮಗೆ ಸಪೋರ್ಟ್ ಆಗಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :— ಅವರು ನಮ್ಮ ಪರವೇ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಪ್ರಧಾನ ಮಂತ್ರಿಗಳು ಬಂದಾಗ, ಮುಖ್ಯಮಂತ್ರಿಗಳು ಒಟ್ಟಿಗೇ ಒಬ್ಬರು ಸ್ವಾಮಿಗಳ ಹತ್ತಿರ ಹೋಗಿ, ನಮ್ಮಿಬ್ಬರ ಆರೋಗ್ಯ ಸರಿಪಡಿಸಿ, ನಮ್ಮಿಬ್ಬರದೂ ಕೆಟ್ಟುಹೋಗಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :— ಆ ರೀತಿ ಹೇಳಿಲ್ಲ. He has asked; How is your health? He replied: it is as good as yours ಅಂತ ಅಂದರಂತೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಇಡೀ ರಾಜ್ಯದ ಬಗ್ಗೆ ಕೇಳುತ್ತಿದ್ದೇನೆ. ತಾವು ದಯವಿಟ್ಟು ಡೈವರ್ಟ್ ಮಾಡಬೇಡಿ.

ಶ್ರೀ ಎಂ.ಪಿ. ಪ್ರಕಾಶ್ :— ನಾನು ಇಡೀ ರಾಜ್ಯದ ಬಗ್ಗೆ ಹೇಳುತ್ತಾ, ಇದರಲ್ಲಿ ಮಾನ್ಯ ಹಾಗೋಡು ತಿಮ್ಮಪ್ಪನವರಿಗೂ ಉತ್ತರ ಕೊಡುವುದಕ್ಕಾಗಿ ಹೇಳುತ್ತಿದ್ದೇನೆ. ಅವರು ಹಣ ಎಲ್ಲಿದೆ, ನಾನು ಮೊನ್ನೆ ಕೇಳಿದ್ದೇನೆಂದು ಹೇಳಿದರು. ನಾವು ಫೆಬ್ರವರಿ ತಿಂಗಳಲ್ಲಿ 30 ಲಕ್ಷ ರೂಪಾಯಿಗಳನ್ನು ಶಿವಮೊಗ್ಗ ಜಿಲ್ಲೆಗೆ ಹೆಚ್ಚುವರಿಯಾಗಿ ಹಣ ಕೊಟ್ಟಿದ್ದೇವೆ. ಆಮೇಲೆ ಯುಟಿಲೈಸೇಷನ್ ಮಾಡದೇ ಇರುವುದಕ್ಕೆ ಏನು ಕಾರಣ ಎಂದರೆ, ಫಲಾನುಭವಿಗಳು ಮುಂದೆ ಬಂದಿಲ್ಲವೆಂದು ಕಾರಣವನ್ನು ನಾನಾಗಲೇ ತಮಗೆ, ಅಧ್ಯಕ್ಷರ ಮೂಲಕ ಅರಿಕೆ ಮಾಡಿಕೊಂಡಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ನಾವು ಹೆಚ್ಚಿನ ಪ್ರಗತಿಯನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ. ಇದಲ್ಲದೇ ಎರಡನೇ ಕಂತಿನ ಮೇಲೆ, ಅವರು ಯಾವ ಹಣವನ್ನೂ ಕೊಡುವುದಿಲ್ಲ. ಈಗಾಗಲೇ ಮಾನ್ಯ ಅಧ್ಯಕ್ಷರು ಹೇಳಿದಂತೆ, ಇ.ಎ.ಎಸ್.ನಲ್ಲಿ 3ನೇ ಕಂತನ್ನೂ ಕೂಡ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ನಮಗೆ ಕೇಂದ್ರ ಸರ್ಕಾರ ತಿಳಿಸಿದೆ. ಹೋದಸಲವೂ ಕೂಡ ಮಾರ್ಚ್ ತಿಂಗಳಲ್ಲಿ ಇ.ಎ.ಎಸ್.ನಲ್ಲಿ ಬರಬೇಕಾದ 3ನೇ ಕಂತನ್ನು ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರು. ಆಗ ಸಂದರ್ಭ ಬೇರೆ ಇತ್ತು. ಚುನಾವಣೆಗಳು ಬಂದವು, ಹೆಚ್ಚು ಹಣ ಖರ್ಚಾಗಿತ್ತು. ಹಾಗೆಯೇ ಸರ್ಕಾರಿ ನೌಕರರಿಗೆ ಹೆಚ್ಚು ಹಣ ಕೊಟ್ಟಿವು, ಆದ್ದರಿಂದ ಕಷ್ಟದ ಪರಿಸ್ಥಿತಿ ಇರುವುದರಿಂದ, ನಿಮಗೆ 3ನೇ ಕಂತನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮತ್ತೆ 1-4-98 ಕ್ಕೆ ಹಣವನ್ನು ಕೊಟ್ಟರು. ಈ ವರ್ಷವೂ ಕೂಡ ಬೇರೆ ಬೇರೆ ಕಷ್ಟಗಳ ಸ್ಥಿತಿ ಇರುವುದರಿಂದ, ನೀವು 3ನೇ ಕಂತನ್ನು ನಿರೀಕ್ಷಿಸಬೇಡಿ ಎಂಬ ಮಾತನ್ನೂ ಕೂಡ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ತಾವು ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಡಿ. ನಾಳೆ ಬೆಳಿಗ್ಗೆ ನಾನು ಡೆಲ್ಲಿಗೆ ಹೋಗಿ, ಹಣವನ್ನು ರಿಲೀಸ್ ಮಾಡಿಸಿಕೊಂಡು ಬಂದು ನಿಮ್ಮ ಕೈಗೆ ಕೊಡುತ್ತೇನೆ. ನೀವು ಹೇಳುವುದು ಸತ್ಯಕ್ಕೆ ದೂರವಾದುದು. ನಾನು ಮೂರು ದಿವಸ ಡೆಲ್ಲಿಯಲ್ಲಿದ್ದು, ಅಂಕಿಅಂಶ ತೆಗೆದುಕೊಂಡು ಬಂದಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಇ.ಎ.ಎಸ್.ಗೆ ಸಂಬಂಧಪಟ್ಟಂತೆ, ಯುಟಿಲೈಸೇಷನ್ ಸರ್ಟಿಫಿಕೇಟ್ ಕೇಂದ್ರ ಸರ್ಕಾರಕ್ಕೆ ಹೋಗಿ ಮೂರು ತಿಂಗಳಾಯಿತು. ಈ ದಿವಸವೇ ಅವರಿಗೆ ತಂದುಕೊಡುತ್ತೇನೆ. ಅವರು 3ನೇ ಕಂತನ್ನು ಕೇಂದ್ರಸರ್ಕಾರದಿಂದ ತಂದರೆ, ಇಡೀ ಸರ್ಕಾರ ಅವರಿಗೆ ಅಭಿನಂದನೆ ಸಲ್ಲಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಕೇಳುತ್ತಾ ಇರುವುದು ದಶಲಕ್ಷ....

ಶ್ರೀ ಎಂ.ಪಿ. ಪ್ರಕಾಶ್ ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ ಇದರಲ್ಲಿ ಎರಡನೇ ಕಂತು ಬರತಕ್ಕಂತಾದ್ದು. 3ನೇ ಕಂತನ್ನು ತಾವು ತರುವುದಾದರೆ, ಈ ಕೂಡಲೇ ಸರ್ಟಿಫಿಕೇಟ್ ಕೊಡುತ್ತೇವೆ.

MR. SPEAKER: This is question hour. I have no time. You can sort it out in my chambers.

ಶ್ರೀ ಬಿ.ಎಸ್. ಯಡಿಯೂರಪ್ಪ :—ಫಲಾನುಭವಿಗಳಿಗೆ ಎರಡೂವರೆ ಎಕರೆ ಇರಬೇಕೆಂದು ಕೇಂದ್ರ ಸರ್ಕಾರ ಹೇಳಿಲ್ಲ. ಇದನ್ನು ರಿಲ್ಯಾಕ್ಸ್ ಮಾಡುವುದಕ್ಕೆ ತಾವು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೇ, ಅದೊಂದು ಕಾರ್ಯ-ಸಾಧುವಾದಂತಹ ಯೋಜನೆ ಆಗುವುದಿಲ್ಲವೆಂದು ಹೇಳಿ ಕನಿಷ್ಟ ಎರಡೂವರೆ ಎಕರೆ ಇರಬೇಕೆಂಬ ಷರತ್ತು ಹಾಕಿರುವುದು ನಿಜ. ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಇದು ಇಲ್ಲ. ಆದರೂ ಕೂಡ ತಾವು ಹೇಳುತ್ತಿದ್ದೀರಿ. ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಎಸ್‌ಸಿ. : ಎಸ್.ಟಿ ಜನಗಳಿಗೆ ಉಪಯೋಗವಾಗಲಿ ಎಂದು ಕೇಳುತ್ತಿದ್ದೇನೆ ಮತ್ತು ಇದರ ಬಗ್ಗೆ ಜಿಲ್ಲಾಪಂಚಾಯಿಗಳಿಗೆ ಅಧಿಕಾರ ಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಪ್ರಶ್ನೆಯಿಂದ ಆಷ್ಟಾದರೂ ಲಾಭವಾಗಲಿ.

ಶ್ರೀ ಎಂ.ಪಿ. ಪ್ರಕಾಶ್ :— ಕೇಂದ್ರ ಸರ್ಕಾರದವರು ಕೆಲವು ಯೋಜನೆಗಳಿಗೆ ಮಾರ್ಗಸೂಚಿಯನ್ನು ಹೇಗೆ ಕೊಡುತ್ತದೋ ಅದೇರೀತಿ ರಾಜ್ಯ ಸರ್ಕಾರವೂ ಕೂಡ

ಮಾರ್ಗಸೂಚಿಯನ್ನು ಕೊಡಬೇಕಾಗುತ್ತದೆ. ನೀವು ಎರಡೂವರೆ ಎಕರೆಗಿಂತ ಕಡಿಮೆ ಕೊಡಿ, ಸರಿ ಹೋಗುತ್ತದೆಂದು ಹೇಳುತ್ತಿದ್ದೀರಿ. ನಾವು ಇದನ್ನು ಪುನರ್ ವಿಮರ್ಶೆ ಮಾಡಿ ಒಂದೂವರೆ ಎಕರೆಗೇ ಕೊಡಬಹುದು. ಇದರ ಬಗ್ಗೆ ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರ ಕೊಡುವುದಕ್ಕಾಗುವುದಿಲ್ಲ.

ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ.

27(137) ಶ್ರೀ ಮಾಟಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಇನ್ನು ಎಷ್ಟು ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದೆ.

ಇ) ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದವರು ಉದ್ದೇಶಿಸಿದ್ದಾರೆ?

ಡಾ : ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) :—

ಅ) ರಾಜ್ಯದಲ್ಲಿ ಒಟ್ಟು 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದೆ.

ಆ) ರಾಜ್ಯದಲ್ಲಿ 1998ನೇ ಅಂದಾಜು ಮಾಡಿದ ಜನಸಂಖ್ಯೆಯ ಪ್ರಕಾರ ರಾಜ್ಯದಲ್ಲಿ ಗ್ರಾಮೀಣ ಜನಸಂಖ್ಯೆ 3.51. ಕೋಟಿ ಇದ್ದು ಜನಸಂಖ್ಯೆಗೆ ಅನುಗುಣವಾಗಿ 1267 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದ್ದು, ಈಗಾಗಲೇ 31-3-98ರ ಅಂತ್ಯದ ವರೆಗೆ 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದೆ.

ಇ) ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಮಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ 1676 ಎಂದು ಹೇಳಿದ್ದಾರೆ. ಇನ್ನು ಎಷ್ಟು ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದೆಯೆಂದರೆ ರಾಜ್ಯದಲ್ಲಿ 1998ನೇ ಇಸ್ವಿಯಲ್ಲಿ ಅಂದಾಜು ಮಾಡಿದ ಜನಸಂಖ್ಯೆಯ ಪ್ರಕಾರ ರಾಜ್ಯದಲ್ಲಿ ಗ್ರಾಮೀಣ ಜನಸಂಖ್ಯೆ 3.51 ಕೋಟಿ ಇದ್ದು, ಈ ಜನಸಂಖ್ಯೆಗನುಗುಣವಾಗಿ 1267 ಪ್ರಾಥಮಿಕ